# <u>ಕರ್ನಾಟಕ ಲೋಕಾಯುಕ್ತ</u>

ನಂ.ಉಪಲೋಕ್-2/ಡಿಇ/122/2019/ಎಆರ್‌ಇ-16.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 16/03/2021.

## <u>ವಿಚಾರಣಾ ವರದಿ</u>

**<u>ಉಪಸ್ಥಿತರು:</u> ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16, ಪ್ರಭಾರ ಎಆರ್‌ಇ-15, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** **ಡಾ॥ ರಾಜಶೇಖರ,** ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ: 1. ಕಂಪ್ಲೆಂಟ್/ಉಪಲೋಕ್/ಎಂವೈಎಸ್-9189/2017/ ಡಿಆರ್‌ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 21/08/2018.**

2. ಸರ್ಕಾರದ ಆದೇಶ ಸಂಖ್ಯೆ: HIMS SIBBANDI 1 08 2019-20, ದಿನಾಂಕ: 24/04/2019.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-122/2019, ಬೆಂಗಳೂರು ದಿನಾಂಕ: 03/05/2019.

* * * *

ಉಪಾಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ಇವರ ನಡಾವಳಿ ಸಂಖ್ಯೆ: ಹಿಮ್ಸ್/ಸಿಬ್ಬಂದಿ-1/08/2019-20,

ಬೆಂಗಳೂರು, ದಿನಾಂಕ: 24.04.2019ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಗೌರವಾನ್ವಿತ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತ–2 ರವರ ಆದೇಶ ಸಂಖ್ಯೆ:ಉಪಲೋಕ್–2/**ಡಿಇ**/**122**/2019 ಬೆಂಗಳೂರು ದಿನಾಂಕ: 03/05/2019 ರಂತೆ ಡಾ॥ ರಾಜಶೇಖರ, ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ (ಇನ್ನು ಮುಂದೆ **ಆಪಾದಿತ ಸರ್ಕಾರಿ ನೌಕರ** ಎಂದು ಸಂಬೋಧಿಸಲ್ಪಡುವ) ರವರ ವಿರುದ್ಧ ದೋಷಾರೋಪಣೆ ತಯಾರು ಮಾಡಿ, ಜಾರಿ ಮಾಡಿ, ಇಲಾಖಾ ವಿಚಾರಣೆ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು–16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ. ಅದರಂತೆ, ಶ್ರೀ **ಸೆಲ್ವಕುಮಾರ್**.ಸಿ. ಅಪರ ನಿಬಂಧಕರು, ವಿಚಾರಣೆಗಳು–16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯು ಈ ಕೆಳಕಂಡಂತೆ ಇರುತ್ತದೆ:–

## ಅನುಬಂಧ–1
## ದೋಷಾರೋಪಣೆ

ಆಪಾದಿತ ಸರ್ಕಾರಿ ನೌಕರರಾದ **ಡಾ॥ ರಾಜಶೇಖರ,** ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಆದ ನೀವು, ಶ್ರೀಮತಿ

ನಿರ್ಮಲಮ್ಮ ಇವರ ಶಸ್ತ್ರ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯ ಇದ್ದರೂ ಸಹ, ಅದನ್ನು ಮರೆಮಾಚಿ ಖಾಸಗಿ ಆಸ್ಪತ್ರೆಗೆ ಹೋಗಲು ಸೂಚಿಸಿ, ಆ ಮೂಲಕ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2
## ದೋಷಾರೋಪಣೆಯ ವಿವರ

ದೂರುದಾರರಾದ ಶ್ರೀ **ಹೆಚ್.ಎಸ್.ಕುಮಾರ್**, ಪಿ.ಹೊಸಹಳ್ಳಿ ಗ್ರಾಮ, ಅರಸಿಕೆರೆ ತಾಲ್ಲೂಕು ನಿವಾಸಿ (ಇನ್ನು ಮುಂದೆ **ದೂರುದಾರರು** ಎಂದು ಸಂಬೋದಿಸಲ್ಪಡುವರು) ಇವರು ತಮ್ಮ ದೂರಿನಲ್ಲಿ ತನ್ನ ಅತ್ತೆ ನಿರ್ಮಲಮ್ಮ ಇವರಿಗೆ ಆಗಾಗ ಹೊಟ್ಟೆ ನೋವು ಕಾಣಿಸಿಕೊಳ್ಳುತ್ತಿತ್ತು. ಆದ್ದರಿಂದ, ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದಾಗ ಆ.ಸ.ನೌಕರರಾದ ನೀವು ಸಿ.ಟಿ.ಸ್ಕ್ಯಾನ್ ಮಾಡಿ, ನಿಮ್ಮ ಅತ್ತೆಯ ಗರ್ಭಕೋಶದಲ್ಲಿ ಕ್ಯಾನ್ಸರ್ ಇದೆ ತಕ್ಷಣ ಆಪರೇಷನ್ ಮಾಡಬೇಕು ಅಂತ ಹೇಳಿರುತ್ತೀರಿ. ನಂತರ ನೀವು ಮರುದಿನ 12-45 ಕ್ಕೆ ಆಸ್ಪತ್ರೆಯಲ್ಲಿ ಹೊರಗೆ ಕರೆದು ಇಲ್ಲಿ ಆಪರೇಷನ್ ಮಾಡಲು ವ್ಯವಸ್ಥೆ ಇಲ್ಲಾ, ಖಾಸಗಿ ಆಸ್ಪತ್ರೆಯಲ್ಲಿ ಅಪರೇಷನ್ ಮಾಡಿಸಬಹುದು ಹಾಗೂ ತಾನೇ ಖುದ್ದು ಬಂದು ಆಪರೇಷನ್

ಮಾಡುತ್ತೇನೆ ಅಂತ ಹೇಳಿರುತ್ತೀರಿ. ದೂರುದಾರರು ಬಿ.ಪಿ.ಎಲ್. ಕಾರ್ಡ್ ಆಧಾರದ ಮೇಲೆ ಚಿಕಿತ್ಸೆಗೆ ಬಂದಿದ್ದಾರೆ ಅಂತ ಹೇಳಿದಾಗ ಅವರ ಅತ್ತೆಯ ಜೀವಕ್ಕೆ ಅಪಾಯ ಇದೆ ಅಂತ ಹೆದರಿಸಿರುತ್ತೀರಿ. ಎನ್.ಡಿ.ಆರ್.ಕೆ. ಕರಿಗೌಡ ಆಸ್ಪತ್ರೆಗೆ ಚೀಟಿ ಬರೆದು ಕೊಟ್ಟು, ಅಲ್ಲಿ ಆಪರೇಷನ್ ಮಾಡಿ ಸುಮಾರು ರೂ.29,700/–ಗಳ ಹಣವನ್ನು ಖರ್ಚು ಮಾಡಿಸಿದ್ದೀರಿ. ಆರೋಗ್ಯ ಸಚಿವರಿಗೆ ಪತ್ರವನ್ನು ಬರೆದು ತಿಳಿಸಿದ್ದೇವೆ ಹಾಗೂ ಅವರ ಸಲಹೆಯಂತೆ ಡಿ.ಹೆಚ್.ಓ. ರವರು ಆತನನ್ನು ಸಂಪರ್ಕಿಸಿ ಡಾ॥ ರಾಜಶೇಖರ ಇವರು ಮಾಡಿರುವುದು ತಪ್ಪು ಅಂತ ತಿಳಿಸಿ ಅರಸಿಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಅವರ ಹೇಳಿಕೆ ಮತ್ತು ಫೋಟೋ ತೆಗೆದುಕೊಂಡು ಬಂದಿದ್ದಾರೆ. ಆ.ಸ.ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಈ ದೂರಿನ ಮೇಲೆ ಆ.ಸ.ನೌಕರರಾದ ನಿಮ್ಮಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಆಪಾದಿತರಾದ ನೀವು ಆಕ್ಷೇಪಣೆಯಲ್ಲಿ ನಿರ್ಮಲಮ್ಮ ಇವರಿಗೆ ಈ ಹಿಂದೆ ಗರ್ಭಕೋಶದ ಶಸ್ತ್ರಚಿಕಿತ್ಸೆ ಆಗಿತ್ತು. ಆದರೆ ಗರ್ಭಕೋಶ ತೆಗೆದ ವೈದ್ಯರು ಅಂಡಾಶಯಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಅಂಡಾಶಯದಲ್ಲಿ ಗೆಡ್ಡೆ ಬೆಳೆದು ಕ್ಯಾನ್ಸರ್ ಉಂಟಾಗಿರುವ ಶಂಕೆ ಇದ್ದಿರುವುದಾಗಿ, ಆದ್ದರಿಂದ, ಬೆಂಗಳೂರಿನ ಕಿದ್ವಾಯಿ ಅಥವಾ ಮೈಸೂರಿನ ಭಾರತಿ ಕ್ಯಾನ್ಸರ್ ಆಸ್ಪತ್ರೆಗೆ ಹೋಗಲು ಸಲಹೆ ನೀಡಿದ್ದಾಗಿ, ಆದರೆ ರೋಗಿಯ ಕಡೆಯವರು ನಿರಾಕರಿಸಿದ್ದಾಗಿ, ಹಾಸನದಲ್ಲಿಯೇ ಶಸ್ತ್ರಚಿಕಿತ್ಸೆ ಮಾಡುವಂತೆ ಒತ್ತಾಯಿಸಿರುತ್ತಾರೆಂದು, ಅಂಡಾಶಯಗಳನ್ನು ತೆಗೆದು ಹಾಕಲು

ಪ್ರಯತ್ನಿಸುತ್ತೇನೆ ಅಂತ ಹೇಳಿ, ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿರುವುದಾಗಿ, ಖಾಸಗಿ ಆಸ್ಪತ್ರೆಯಲ್ಲಿ ಆಗುವಂತಹ ಖರ್ಚುಗಳನ್ನು ಕೊಡಲು ಒಪ್ಪಿಕೊಂಡ ನಂತರ ಶಸ್ತ್ರಚಿಕಿತ್ಸೆ ಮಾಡಿದ್ದೇನೆ ಎಂದು, ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಯಾವುದೇ ಒತ್ತಡ ಹೇರಿಲ್ಲವೆಂದು, ಈಗ ಗುಣಮುಖರಾದ ನಂತರ ತನ್ನ ಮೇಲೆ ವಿನಾಕಾರಣ ದೂರನ್ನು ಕೊಟ್ಟಿದ್ದಾರೆಂದು, ತಾನು ಕಡುಬಡವರು ಅಂತ ಈಗ ಹೇಳಿದ್ದಾಗಿ, ಅವರಿಗೆ ತೊಂದರೆ ಆಗಿದ್ದರೆ ಕಾನೂನಿನಲ್ಲಿ ಅವಕಾಶವಿದ್ದರೆ ಸ್ವಲ್ಪಮಟ್ಟಿಗೆ ಸಹಾಯ ಮಾಡಲು ಇಚ್ಛಿಸುತ್ತೇನೆ ಅಂತ ತಿಳಿಸಿರುತ್ತೀರಿ.

ಆ.ಸ.ನೌಕರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಆಪರೇಷನ್ ವಿಚಾರವಾಗಿ ತನ್ನ ಹತ್ತಿರ ಮಾತನಾಡಿರುವುದು ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದೆ. ವಿಚಾರಣೆ ಸಂದರ್ಭದಲ್ಲಿ ಸಲ್ಲಿಸುವುದಾಗಿ, ಎತ್ತುಗಳನ್ನು ಮಾರಾಟ ಮಾಡಿ ವೈದ್ಯರಿಗೆ ಹಣವನ್ನು ಕೊಟ್ಟಿದ್ದಾಗಿ, ಆದ್ದರಿಂದ, ಆ.ಸ.ನೌಕರರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ ಎಂದು ತಿಳಿಸಿದ್ದಾರೆ.

ಇದೇ ಪ್ರಕರಣದಲ್ಲಿರುವ ದೂರುದಾರರು ಇದೇ ವಿಷಯದ ಮೇಲೆ ಮಾನ್ಯ ಆರೋಗ್ಯ ಸಚಿವರಿಗೆ ದೂರು ಸಲ್ಲಿಸಿದ್ದು, ಅವರ ನಿರ್ದೇಶನದಂತೆ ಜಿಲ್ಲಾ ಆರೋಗ್ಯ ಅಧಿಕಾರಿಗಳು ವಿಚಾರಣೆಯನ್ನು ಮಾಡುತ್ತಿರುವುದಾಗಿ ತಿಳಿದು ಬಂದ ಕಾರಣ, ಹಾಸನ ಜಿಲ್ಲಾ

ವೈದ್ಯಾಧಿಕಾರಿಗಳಿಗೆ ಈ ಪ್ರಕರಣದಲ್ಲಿ ದಿನಾಂಕ: 14-11-2017 ರಂದು ಆದೇಶವನ್ನು ಪಡೆದು ಸೂಚನಾ ಪತ್ರವನ್ನು ನೀಡಿ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು.

ಅದರಂತೆ, ದಿನಾಂಕ: 14-12-2017 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರು ವರದಿಯನ್ನು ಸಲ್ಲಿಸಿ ಅದರೊಂದಿಗೆ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ಹಾಸನ ಇವರು ಸಲ್ಲಿಸಿದ್ದ ದಿನಾಂಕ: 23-06-2017 ಮತ್ತು 12-12-2017 ರ ವರದಿಗಳನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ.

ಸದರಿ ವರದಿಗಳನ್ನು ಪರಿಶೀಲಿಸಲಾಗಿ, ಶಸ್ತ್ರ ಚಿಕಿತ್ಸೆಗೆ ಒಳಗಾದ ಶ್ರೀಮತಿ ನಿರ್ಮಲಮ್ಮ ಇವರನ್ನು ಅವರ ಸ್ವಗ್ರಾಮವಾದ ಬ್ರಹ್ಮಸಮುದ್ರ ಗ್ರಾಮಕ್ಕೆ ತೆರಳಿ ವಿಚಾರಣೆ ಮಾಡಿ, ಈ ಪ್ರಕರಣದ ದೂರುದಾರರಿಂದ ಹೇಳಿಕೆ ಪಡೆದಾಗ ಅವರು ಆ.ಸ.ನೌ ರವರು ಗರ್ಭಕೋಶದ ಶಸ್ತ್ರಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ವಿಷಯವನ್ನು ಪರಿಶೀಲಿಸಿ ಸದರಿ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ಹಾಸನ ಇವರು ತಮ್ಮ ವರದಿಯಲ್ಲಿ, ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಬಹುದಾಗಿದ್ದರೂ ಆ.ಸ.ನೌಕರರು ಖಾಸಗಿ ಆಸ್ಪತ್ರೆಗೆ ಕಳುಹಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಮತ್ತು ಈ ಬಗ್ಗೆ ಹೆಚ್ಚಿನ ವಿವರಣೆ ಪಡೆಯಲು ಆಸ್ಪತ್ರೆಯ ಸಂಬಂಧಪಟ್ಟ ವೈದ್ಯರು ಮತ್ತು ಸಿಬ್ಬಂದಿಗಳು ಹಾಜರಾಗದ ಕಾರಣ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಲಾಗುತ್ತಿಲ್ಲವಾದ್ದರಿಂದ, ಆ.ಸ.ನೌಕರರು ಮೇಲ್ನೋಟಕ್ಕೆ ಹಾಸನ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾದವರನ್ನು ಅಲ್ಲಿ ಚಿಕಿತ್ಸೆ ನೀಡುವ ಸೌಲಭ್ಯಗಳು ಇದ್ದರೂ ಸಹ

ಅನಗತ್ಯವಾಗಿ ಹಾಸನದ ಖಾಸಗಿ ಆಸ್ಪತ್ರೆಯಾದ ಎನ್.ಡಿ.ಆರ್.ಕೆ. ಕರಿಗೌಡ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುವುದು ವರದಿಯಿಂದ ಗೋಚರಿಸುತ್ತದೆ.

ಮೇಲ್ಕಂಡ ವರದಿಯೊಂದಿಗೆ ಲಗತ್ತಿಸಿರುವ ದೂರುದಾರರ ಹೇಳಿಕೆಯನ್ನು ಸಹ ಪರಿಶೀಲಿಸಲಾಗಿ ಆ.ಸ.ನೌಕರರು, ದೂರುದಾರರನ್ನು ಹೆದರಿಸಿ ಹಿಮ್ಸ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಲು ಸೌಕರ್ಯವಿಲ್ಲ ಆದ್ದರಿಂದ ಖಾಸಗಿ ಆಸ್ಪತ್ರೆಯಲ್ಲಿ ತಾವೇ ಶಸ್ತ್ರ ಚಿಕಿತ್ಸೆ ಮಾಡುವುದಾಗಿ ಹೇಳಿದ ಕಾರಣ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಾಯಿತು ಎಂದು ಹೇಳಿರುವುದು ಕಂಡು ಬರುತ್ತದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರು ಸಲ್ಲಿಸಿದ ವರದಿಯ ಮೇಲೆ ಆ.ಸ.ನೌಕರರಿಂದ ಮತ್ತೊಮ್ಮೆ ಆಕ್ಷೇಪಣೆಗಳನ್ನು ಕೇಳಲಾಗಿ, ಈ ಮುಂಚೆ ಸಲ್ಲಿಸಿರುವ ತಮ್ಮ ಆಕ್ಷೇಪಣೆಯಲ್ಲಿನ ವಿಷಯವನ್ನೇ ಪುನರುಚ್ಚರಿಸಿರುತ್ತೀರಿ.

ಈ ಮೇಲಿನ ಅಂಶಗಳು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಆ.ಸ.ನೌಕರರು, ದೂರುದಾರರ ಅತ್ತೆ ಶ್ರೀಮತಿ ನಿರ್ಮಲಮ್ಮ ಇವರನ್ನು, ದಿನಾಂಕ: 3-3-2017 ರಂದು ಸರ್ಕಾರಿ ಆಸ್ಪತ್ರೆಯಾದ ಚಾಮರಾಜೇಂದ್ರ ಆಸ್ಪತ್ರೆ ಹಾಸನದಲ್ಲಿ ಹೊರರೋಗಿ ಎಂದು ತಪಾಸಣೆ ಮಾಡಿ, ಅವರಿಗೆ ಪದೇ ಪದೇ ಹೊಟ್ಟೆನೋವು ಕಾಣಿಸುತ್ತಿದ್ದರಿಂದ ಅವರಿಗೆ ಗರ್ಭಕೋಶದ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಅಭಿಪ್ರಾಯಪಟ್ಟು ಹಾಸನದ ವೈದ್ಯಕೀಯ

ವಿಜ್ಞಾನಗಳ ಸಂಸ್ಥೆ (ಹಿಮ್ಸ್)ನಲ್ಲಿ ಸದರಿ ಶಸ್ತ್ರಚಿಕಿತ್ಸೆಗೆ ಸೌಲಭ್ಯವಿದ್ದರೂ ಶ್ರೀಮತಿ ನಿರ್ಮಲಮ್ಮ ಇವರಿಗೆ ಹಾಸನದ ಖಾಸಗಿ ಆಸ್ಪತ್ರೆಯಾದ ಎನ್.ಡಿ.ಆರ್.ಕೆ. ಕರಿಗೌಡ ಆಸ್ಪತ್ರೆಯಲ್ಲಿ ದಿನಾಂಕ: 20-03-2017 ರಂದು ಗರ್ಭಕೋಶದ ಶಸ್ತ್ರಚಿಕಿತ್ಸೆಯನ್ನು ಮಾಡಿರುವುದಾಗಿ ಕಂಡು ಬಂದಿರುತ್ತದೆ. ಸದರಿ ವಿಷಯವನ್ನು ಆಪಾದಿತ ಸರ್ಕಾರಿ ನೌಕರರಾದ ನೀವು ಎಸಗಿರುವ ಕೃತ್ಯವು ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರಡಿ ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡು ಬಂದಿದ್ದರಿಂದ ಆ.ಸ.ನೌಕರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿದ್ದು, ನಿಮ್ಮ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡುವಂತೆ ಕೋರಿರುವುದನ್ನು ಪರಿಗಣಿಸಿ ಸಕ್ಷಮ ಪ್ರಾಧಿಕಾರವು, ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ, ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತ-2 ರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ **ನಿಮ್ಮ ವಿರುದ್ಧ ಮೇಲ್ಕಂಡಂತೆ ದೋಷಾರೋಪಣೆ.**

3) ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 15/07/2019 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ನಂತರ ಆ.ಸ.ನೌ.ರವರು ದಿನಾಂಕ 09/09/2019 ರಿಂದ ವಿಚಾರಣೆ ಮುಗಿಯುವವರೆಗೂ

ವಿಚಾರಣೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರನ್ನು **ದಿನಾಂಕ 16/11/2019 ರಂದು ಏಕತರ್ಫಿ ಎಂದು ಪರಿಗಣಿಸಲಾಗಿರುತ್ತದೆ** ಹಾಗೂ ತಮ್ಮ ಪರವಾಗಿ ರಕ್ಷಣಾ ಹೇಳಿಕೆಯನ್ನಾಗಲಿ, ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

4) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. **ಹೆಚ್.ಎಸ್. ಕುಮಾರ್** (ದೂರುದಾರರ) ರವರನ್ನು **ಪಿ.ಡಬ್ಲ್ಯೂ–1** ಎಂದು ಮತ್ತು **ಡಾ॥ ವೆಂಕಟೇಶ್,** ಹಾಸನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ರವರನ್ನು **ಪಿಡಬ್ಲ್ಯೂ–2** ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ಮತ್ತು ನಿ.ಪಿ–15 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ಆ.ಸ.ನೌರವರು ಗೈರು ಹಾಜರಾಗಿರುವುದರಿಂದ, ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಅನ್ನು ಪಡೆದುಕೊಳ್ಳಲಾಗಿರುವುದಿಲ್ಲ.

5) ಆ.ಸ.ನೌರವರು ರಕ್ಷಣಾ ಹೇಳಿಕೆಯನ್ನು ಸಲ್ಲಿಸದೆ ಏಕತರ್ಫಿಯಾಗಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

6) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

7) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

8) ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

9) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

10) **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. **ಹೆಚ್.ಎಸ್. ಕುಮಾರ್** (ದೂರುದಾರರ) ರವರನ್ನು **ಪಿ.ಡಬ್ಲ್ಯೂ–1** ಎಂದು ಮತ್ತು **ಡಾ॥ ವೆಂಕಟೇಶ್,** ಹಾಸನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ರವರನ್ನು **ಪಿಡಬ್ಲ್ಯೂ–2** ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ಮತ್ತು ನಿ.ಪಿ–15 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

11) ದೂರುದಾರ ಪಿಡಬ್ಲ್ಯೂ–1 ಶ್ರೀ. **ಹೆಚ್.ಎಸ್. ಕುಮಾರ್** ರವರು ತಮ್ಮ ಮುಖ್ಯವಿಚಾರಣೆಯಲ್ಲಿ, ಆ.ಸ.ನೌ.ರವರು ಹಾಸನದ ಜಿಲ್ಲಾಸ್ಪತ್ರೆಯಲ್ಲಿ ಸ್ತ್ರೀ ರೋಗ ವಿಭಾಗದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು, ತನ್ನ ಅತ್ತೆ ನಿರ್ಮಲಮ್ಮರವರಿಗೆ ದಿನಾಂಕ 14/03/2017ರಂದು ಅರಸೀಕರೆ ಸರ್ಕಾರಿ ಆಸ್ಪತ್ರೆ ವೈದ್ಯರು ಹೊಟ್ಟೆನೋವು ಇದ್ದುದರಿಂದ, ಸಿಟಿ ಸ್ಕ್ಯಾನ್ ಮಾಡುವಂತೆ ಹೇಳಿದ್ದರೆಂದು, ಅದರಂತೆ ತಾನು ದಿನಾಂಕ 14/03/2017ರಂದು ಹಾಸನದ ಜಿಲ್ಲಾಸ್ಪತ್ರೆಯಲ್ಲಿ ಸಿಟಿ ಸ್ಕ್ಯಾನ್ ಮಾಡಿಸಿದ್ದಾಗಿ, ಸದರಿ ಸಿಟಿ ಸ್ಕ್ಯಾನ್‌ನ ವರದಿಯನ್ನು ದಿನಾಂಕ 14/03/2017ರಂದು ತನಗೆ ನೀಡಿದ್ದರೆಂದು ನುಡಿದಿರುತ್ತಾರೆ. ಪಿಡಬ್ಲ್ಯೂ–1 ರವರು ಮುಂದುವರೆದು, ಆ ದಿನ ಹಾಸನದ ಜಿಲ್ಲಾಸ್ಪತ್ರೆಯಲ್ಲಿ ಹೊರರೋಗಿಗಳ ವಿಭಾಗದಲ್ಲಿ ಈ ಆ.ಸ.ನೌ.ರವರು ವೈದ್ಯಾಧಿಕಾರಿಯಾಗಿ ಕರ್ತವ್ಯದ ಮೇಲಿದ್ದಾಗ, ಆ ವರದಿಯನ್ನು ನೋಡಿದ್ದಾಗಿ, ತನ್ನ ಅತ್ತೆಗೆ ಗರ್ಭಕೋಶದಲ್ಲಿ ಕ್ಯಾನ್ಸರ್ ಇರುವುದಾಗಿ ಹೇಳಿ ಶಸ್ತ್ರಚಿಕಿತ್ಸೆ ಅವಶ್ಯಕವಿರುವುದಾಗಿ ತಿಳಿಸಿದ್ದಾಗಿ, ನಂತರ ತಾನು ಆ ವೈದ್ಯರಿಗೆ ರೋಗಿಯನ್ನು ಯಾವಾಗ ಕರೆದುಕೊಂಡು ಬರಬೇಕೆಂದು ಕೇಳಿದ್ದಕ್ಕೆ, ದಿನಾಂಕ 20/03/2017 ರಂದು ಕರೆದುಕೊಂಡು ಬರುವಂತೆ ತಿಳಿಸಿದರೆಂದು ನುಡಿದಿರುತ್ತಾರೆ.

12) ಪಿಡಬ್ಲ್ಯೂ–1 ರವರು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ದಿನಾಂಕ 20/03/2017 ರಂದು ತಾನು ತನ್ನ ಅತ್ತೆಯನ್ನು ಆ.ಸ.ನೌ.ರವರ ಬಳಿ ಕರೆದುಕೊಂಡು ಹೋದಾಗ, ತನ್ನನ್ನು ಆ.ಸ.ನೌ.ರವರು ಜಿಲ್ಲಾಸ್ಪತ್ರೆಯಿಂದ ಹೊರಗೆ ಕರೆದುಕೊಂಡು ಬಂದು, ನಂತರ ಜಿಲ್ಲಾಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಲು ಸೌಲಭ್ಯವಿಲ್ಲವೆಂದು ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಆ.ಸ.ನೌ.ರವರೇ ಬಂದು ಶಸ್ತ್ರಚಿಕಿತ್ಸೆ ಮಾಡುವುದಾಗಿ ಹೇಳಿ, ಒಂದು ವಾರದಲ್ಲಿ ಶಸ್ತ್ರ ಚಿಕಿತ್ಸೆ ಮಾಡದಿದ್ದಲ್ಲಿ ಪ್ರಾಣಕ್ಕೆ ಅಪಾಯವೆಂದು ಆ.ಸ.ನೌ.ರವರು ತನಗೆ ಹೆದರಿಸಿದರೆಂದು, ತಾನು ಸರ್ಕಾರಿ ಜಿಲ್ಲಾಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುವಂತೆ ಕೇಳಿಕೊಂಡರೂ ಸಹ ಸೌಲಭ್ಯವಿಲ್ಲವೆಂದು ತಿಳಿಸಿದರೆಂದು ನುಡಿದಿರುತ್ತಾರೆ.

13) ಪಿಡಬ್ಲ್ಯೂ-1/ದೂರುದಾರ ರವರ ಮುಂದುವರೆದ ಸಾಕ್ಷ್ಯದಲ್ಲಿ, ತಾನು ಆ.ಸ.ನೌ.ರವರಿಗೆ ಎಷ್ಟು ಖರ್ಚಾಗುತ್ತದೆ ಎಂದು ಕೇಳಿದ್ದಕ್ಕೆ ರೂ. 35,000/-ಗಳು ಬೇಕಾಗುತ್ತದೆಂದು ತಿಳಿಸಿದರೆಂದು, ತಾನು ಅಷ್ಟು ಹಣ ಸಾಧ್ಯವಿಲ್ಲವೆಂದು ಹೇಳಿದ್ದಕ್ಕೆ ರೂ. 30,000/- ಗಳನ್ನು ನೀಡುವಂತೆ ಹೇಳಿರುತ್ತಾರೆಂದು, ನಂತರ ತಾನು ತನ್ನ 2 ಎತ್ತುಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ರೂ. 21,000/-ಗಳನ್ನು ಆ.ಸ.ನೌ.ರವರಿಗೆ ನೀಡಿರುತ್ತೇನೆಂದು, ಔಷಧಿಗಾಗಿ ಸುಮಾರು ರೂ.9,000/-ಗಳಷ್ಟು ಖರ್ಚುವೆಚ್ಚವಾಯಿತೆಂದು, ನಂತರ ಆ.ಸ.ನೌ.ರವರು ಶಸ್ತ್ರಚಿಕಿತ್ಸೆಯನ್ನು ದಿನಾಂಕ 20/03/2017 ರಂದು ಮಾಡಿ, ದಿನಾಂಕ 23/03/2017 ರಂದು ಡಿಸ್ಚಾರ್ಜ್ ಮಾಡಿರುತ್ತಾರೆಂದು ನುಡಿದಿರುತ್ತಾರೆ.

14) ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, 15 ದಿನ ಕಳೆದ ಮೇಲೆ ಹೊಲಿಗೆ ಬಿಚ್ಚುವ ಸಲುವಾಗಿ ತನ್ನ ಊರಿಗೆ ಸಮೀಪದಲ್ಲಿರುವ ಕಣಕಟ್ಟೆ ಸರ್ಕಾರಿ ಆಸ್ಪತ್ರೆಗೆ ಹೋದಾಗ, ಅಲ್ಲಿ ಅವರು ಹೊಲಿಗೆ ಬಿಚ್ಚಿದರೆಂದು, ಅವರು ತನಗೆ ಶಸ್ತ್ರಚಿಕಿತ್ಸೆಯನ್ನು ಎಲ್ಲಿ ಮಾಡಿಸಿದ್ದೀರಿ ಎಂದು ಕೇಳಿದ್ದಕ್ಕೆ, ತಾನು ಎನ್.ಡಿ.ಆರ್.ಕೆ. ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿದ್ದಾಗಿ ತಿಳಿಸಿದೆನೆಂದು, ಅದಕ್ಕೆ ಅಲ್ಲಿನ ವೈದ್ಯರು ಈ ಶಸ್ತ್ರಚಿಕಿತ್ಸೆ ಮಾಡಲು ಹಾಸನ ಜಿಲ್ಲಾಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳು ದೊರಕುವುದಾಗಿ ತನಗೆ ತಿಳಿಸಿದರೆಂದು, ನಂತರ ತಾನು ಈ ವೈದ್ಯಾಧಿಕಾರಿಗಳು ಮೋಸ ಮಾಡಿರುವುದು ಗೊತ್ತಾಗಿ ಆರೋಗ್ಯ ಸಚಿವರಿಗೆ ಅಂಚೆ ಮುಖಾಂತರ ದೂರು ಕಳುಹಿಸಿರುವುದಾಗಿ, ಸದರಿ ದೂರನ್ನು ತನಿಖೆ ಮಾಡಿ ಅದನ್ನು ಮುಚ್ಚಿಹಾಕಿರುತ್ತಾರೆಂದು ನುಡಿದಿರುತ್ತಾರೆ. ಪಿಡಬ್ಲ್ಯೂ-1 ರವರು ಮುಂದುವರೆದ ಸಾಕ್ಷ್ಯದಲ್ಲಿ, ತದನಂತರ ತಾನು ಈ ಬಗ್ಗೆ ಹಾಸನದಲ್ಲಿನ ಲೋಕಾಯುಕ್ತ ಕಛೇರಿಗೆ ಲಿಖಿತ ದೂರು ಸಲ್ಲಿಸಿದ್ದಾಗಿ, ನಂತರ ತಾನು ಈ ಶಸ್ತ್ರಚಿಕಿತ್ಸೆ ಮಾಡಲು ಹಾಸನ ಜಿಲ್ಲಾಸ್ಪತ್ರೆಯಲ್ಲಿ ಸೌಲಭ್ಯ ಇರುವ ಬಗ್ಗೆ ಮಾಹಿತಿ ಹಕ್ಕಿನಡಿಯಲ್ಲಿ ಲಿಖಿತ ಮಾಹಿತಿ ಪಡೆದಿಕೊಂಡಿದ್ದಾಗಿ, ತಾನು ಸಲ್ಲಿಸಿದ ದೂರಿನ ಪ್ರತಿಯನ್ನು **ನಿಪಿ-1** ಎಂದು, ಪ್ರಪತ್ರ-1 ಮತ್ತು ಪ್ರಪತ್ರ-2ರ ಪ್ರತಿಗಳನ್ನು **ನಿಪಿ-2** ಮತ್ತು

**ನಿಪಿ–3** ಎಂದು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ.ರವರು ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಕೊಳ್ಳುವಂತೆ ನೀಡಿದ ಹೊರರೋಗಿ ಚೀಟಿಯ ಜೆರಾಕ್ಸ್ ಪ್ರತಿಯನ್ನು **ನಿಪಿ–4** ಎಂದು, ದಿನಾಂಕ 20/03/2017ರಂದು ಎನ್.ಡಿ.ಆರ್.ಕೆ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ನೀಡಿದ ರಸೀದಿಯನ್ನು **ನಿಪಿ–5** ಮತ್ತು ಹಾಸನದ ಜಿಲ್ಲಾಸ್ಪತ್ರೆಯ ಸಿ.ಟಿ.ಸ್ಕ್ಯಾನ್ ವರದಿಯ ಜೆರಾಕ್ಸ್ ಪ್ರತಿಯನ್ನು **ನಿಪಿ–6** ಎಂದು ಗುರುತಿಸಿಕೊಂಡಿರುತ್ತಾರೆ. ತಾನು ಆರೋಗ್ಯ ಸಚಿವರಿಗೆ ನೀಡಿದ ದೂರಿನನ್ವಯ ತನಿಖೆಗಾಗಿ ಹಾಸನ ಆರೋಗ್ಯಾಧಿಕಾರಿಗಳು ತನ್ನ ಬಳಿ ಬಂದು ಹೇಳಿಕೆ ಪಡೆದಿದ್ದು, ಸದರಿ ಹೇಳಿಕೆಯ ಜೆರಾಕ್ಸ್ ಪ್ರತಿಯನ್ನು **ನಿಪಿ–7 (2 ಹಾಳೆಗಳು)** ಎಂದು, ಹಾಸನ ಜಿಲ್ಲಾಸ್ಪತ್ರೆಯಲ್ಲಿ ಸದರಿ ಶಸ್ತ್ರಚಿಕಿತ್ಸೆ ಸೌಲಭ್ಯ ಇರುವ ಬಗ್ಗೆ ತಾನು ಮಾಹಿತಿ ಹಕ್ಕಿನಡಿಯಲ್ಲಿ ಪಡೆದ ದಾಖಲೆಯ ಪ್ರತಿಯನ್ನು **ನಿಪಿ–8** ಎಂದು, ಈ ಪ್ರಕರಣದ ದೂರಿನ ವಿಚಾರಣೆ ಕಾಲಕ್ಕೆ ತಾನು ಈ ಸಂಸ್ಥೆಗೆ ಸಲ್ಲಿಸಿದ ಪ್ರತ್ಯುತ್ತರದ ಪ್ರತಿಯನ್ನು **ನಿಪಿ–9** ಎಂದು, ಡಿಸ್ಚಾರ್ಜ್ ಸಮ್ಮರಿ ಜೆರಾಕ್ಸ್ ಪ್ರತಿಯನ್ನು **ನಿಪಿ–10 (2 ಹಾಳೆಗಳು)** ಎಂದು, ಗುರುತಿಸಿಕೊಂಡಿರುತ್ತಾರೆ. ಪಿಡಬ್ಲ್ಯೂ–1 ರವರ ಮುಂದುವರೆದ ಸಾಕ್ಷ್ಯದಲ್ಲಿ, **ಆ.ಸ.ನೌ.ರವರು ಹಾಸನ ಜಿಲ್ಲಾಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಸರ್ಕಾರಿ ಸೌಲಭ್ಯ ಕಲ್ಪಿಸಿದ್ದರೂ ಸಹ ಅದನ್ನು ಮರೆಮಾಚಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತೆ ಶಿಫಾರಸ್ಸು ಮಾಡಿ ದುರ್ನಡತೆ ಎಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.**

15) ಪಿಡಬ್ಲ್ಯೂ–2 **ಡಾ॥ ವೆಂಕಟೇಶ್,** ಹಾಸನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು 2014 ರಿಂದ 2018ರ ವರೆಗೆ ಕರ್ತವ್ಯ ನಿರ್ವಹಿಸಿರುವುದಾಗಿ, ಆಸನೌ ರವರಾದ ಡಾ: ರಾಜಶೇಖರ್ ರವರು ಹಾಸನ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ಸ್ತ್ರೀರೋಗ ತಜ್ಞ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು, ಆ ಸಮಯದಲ್ಲಿ ಆರೋಗ್ಯ ಸಚಿವರಾಗಿದ್ದ ಶ್ರೀ. ರಮೇಶ್ ರವರಿಂದ ಬಂದ ಪತ್ರವನ್ನು ತನಗೆ ಕಳುಹಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದರೆಂದು,

ದೂರಿನಲ್ಲಿನ ಆಪಾದನೆ ಏನೆಂದರೆ, ಒಬ್ಬ ರೋಗಿಯಾದ ಶ್ರೀಮತಿ ನಿರ್ಮಲಮ್ಮ ಎಂಬುವವರು ಗರ್ಭಕೋಶದಲ್ಲಿ ತೊಂದರೆಯಾಗಿ ತಪಾಸಣೆಗೆ ಒಳಗಾಗಿದ್ದು, ಅವರನ್ನು ಹಾಸನ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಈ ಆಸನೌರವರ ಬಳಿ ಹೋದಾಗ ಅವರು ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ತಿಳಿಸಿರುತ್ತಾರೆಂದು, ಈ ಆಸನೌರವರು ಆ ಆಸ್ಪತ್ರೆಯಲ್ಲಿ ಶಸ್ತ್ರ ಚಿಕ್ಸಿತೆ ಮಾಡಲು ಎಲ್ಲಾ ಸೌಲಭ್ಯ ಇದ್ದರೂ ಸಹ, ಅವರನ್ನು ಖಾಸಗಿ ಆಸ್ಪತ್ರೆಯಾದ ಎನ್.ಡಿ.ಆರ್.ಕೆ ಯಲ್ಲಿ ಅಪರೇಷನ್ ಮಾಡಿಸಲು ಸೂಚಿಸಿರುತ್ತಾರೆಂದು, ಈ ಆಸನೌರವರ ಸೂಚನೆಯಂತೆ ರೋಗಿ ಶ್ರೀಮತಿ ನಿರ್ಮಲಮ್ಮರವರು ಎನ್.ಡಿ.ಆರ್.ಕೆ ಆಸ್ಪತ್ರೆಯಲ್ಲಿ ಶಸ್ತ್ರ ಚಿಕ್ಸಿತೆ ಮಾಡಿಕೊಂಡು ಸುಮಾರು ರೂ. 30,000/- ಗಳಷ್ಟು ಖರ್ಚು ಆಗಿರುತ್ತದೆಂದು ಆರೋಗ್ಯ ಸಚಿವರಿಗೆ ದೂರು ಸಲ್ಲಿಸಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ತನಗೆ ತನಿಖೆ ಮಾಡಿ ವರದಿಯನ್ನು ಹೆಚ್.ಐ.ಎಂ.ಎಸ್ (ಹಾಸನ ವೈದ್ಯಕೀಯ ಕಾಲೇಜು) ರವರು ಸಲ್ಲಿಸುವಂತೆ ತನಗೆ ನಿರ್ದೇಶಿಸಿದ್ದರೆಂದು, ಆ ಪ್ರಕಾರ ತಾನು ದಿ: 20/05/2017 ರಂದು ಮಧ್ಯಾಹ್ನ ತನ್ನ ಕಛೇರಿಗೆ ಸೂಕ್ತ ದಾಖಲೆಗಳೊಂದಿಗೆ ಹಾಜರಾಗುವಂತೆ ಆಸನೌ ರವರಿಗೆ ತಿಳಿಸಿದ್ದಾಗಿ, ಅದರೆ ಆಸನೌ ರವರು ಆ ದಿನ ತನ್ನ ಮುಂದೆ ಹಾಜರಾಗಲಿಲ್ಲವೆಂದು ನುಡಿದಿರುತ್ತಾರೆ.

16) ಪಿಡಬ್ಲ್ಯೂ-2 ರವರ ಮುಂದುವರೆದ ಸಾಕ್ಷ್ಯದಲ್ಲಿ, ದಿ: 02/05/2017 ರಂದು ತಾನು ಡಾ: ಜನಾರ್ಧನ್ ಮತ್ತು ಟಿ.ಹೆಚ್.ಓ ರವರು ಕೂಡಿಕೊಂಡು ರೋಗಿಯ ಮನೆಗೆ ಹೋದಾಗ ಅಲ್ಲಿ ಒಬ್ಬ ಹೆಚ್.ಎಸ್ ಕುಮಾರ್ ಎಂಬುವವರು ರೋಗಿಯ ಅಳಿಯನಿದ್ದು, ಅವರನ್ನು ಭೇಟಿಯಾಗಿ ವಿಚಾರಿಸಿದ್ದಾಗಿ, ರೋಗಿಯಾದ ನಿರ್ಮಲಮ್ಮ ರವರು ಹಿಮ್ಸ್‌ನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾಗಿ, ಅಲ್ಲಿ ಈ ಆಸನೌರವರು ಶಸ್ತ್ರಚಿಕಿತ್ಸೆ ಮಾಡಲು ಸೌಲಭ್ಯ ಇಲ್ಲವೆಂದು ತಿಳಿಸಿದ್ದಾಗಿ ಮತ್ತು ಎನ್.ಡಿ.ಆರ್.ಕೆ ಖಾಸಗಿ ಆಸ್ಪತ್ರೆಗೆ ಬರುವಂತೆ ಸೂಚಿಸಿದ್ದಾಗಿ ತಮಗೆ ತಿಳಿಸಿದರೆಂದು, ಅದೇ ಪ್ರಕಾರ ಶ್ರೀ. ಹೆಚ್.ಎಸ್ ಕುಮಾರ್ ರವರು ತಮ್ಮ ಮುಂದೆ ತಮ್ಮ ಲಿಖಿತ ಹೇಳಿಕೆಯನ್ನು ನಿ.ಪಿ-11 ರಂತೆ ನೀಡಿರುತ್ತಾರೆಂದು ನುಡಿದಿರುತ್ತಾರೆ. **ಮುಂದುವರೆದು,**

ದಿ: 12/05/2017 ರಂದು ಹಿಮ್ಸ್ ಆಸ್ಪತ್ರೆಯ ನಿರ್ದೇಶಕರಿಗೆ ಪತ್ರ ಬರೆದು ದಿ: 20/05/2017 ರಂದು ಹಾಜರಾಗುವಂತೆ ಮತ್ತು ರೋಗಿಯ ಚಿಕ್ಸಿತೆಗೆ ಸಂಬಂಧಪಟ್ಟ ವೈದ್ಯಾಧಿಕಾರಿಗಳನ್ನು ಕಳುಹಿಸುವಂತೆ ನಿರ್ದೇಶಿಸಿ ತಾನು ಪತ್ರ ಬರೆದಿರುವುದಾಗಿ, ಸದರಿ ಪತ್ರವನ್ನು **ನಿಪಿ–12** ಎಂದು, ಗುರುತಿಸಿದ್ದು, ನಂತರ ತಾನು ದಿ: 22/05/2017 ರಂದು ಈ ರೋಗಿಯ ಚಿಕ್ಸಿತೆಗೆ ಸಂಬಂಧಪಟ್ಟಂತೆ ಆಸನೌರವರು ಖಾಸಗಿ ಆಸ್ಪತ್ರೆಗೆ ಕಳುಹಿಸಿ ಗರ್ಭಕೋಶದ ಶಸ್ತ್ರ ಚಿಕಿತ್ಸೆ ಮಾಡಿದ ಬಗ್ಗೆ ಹೆಚ್ಚಿನ ವಿಚಾರಣೆಗಾಗಿ ತಾನು ವರದಿ ಸಲ್ಲಿಸಲು ಆಸನೌ ರವರನ್ನು ಹಾಜರು ಪಡಿಸುವಂತೆ ಜಿಲ್ಲಾ ಶಸ್ತ್ರಚಿಕ್ಸಿತಕರಿಗೆ ಪತ್ರವನ್ನು ನಿ.ಪಿ–13 ರಂತೆ ಬರೆದಿದ್ದಾಗಿ, ಆದರೂ ಸಹ ಆಸನೌರವರು ವಿಚಾರಣೆಗಾಗಿ ತನ್ನ ಮುಂದೆ ಹಾಜರಾಗಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

17) ಪಿಡಬ್ಲ್ಯೂ–2 ರವರ ಮುಂದುವರೆದ ಸಾಕ್ಷ್ಯದಲ್ಲಿ, ದಿ: 23/06/2017 ರಂದು ಡಾ: ಜನಾರ್ಧನ್ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ತನಗೆ ವರದಿ ಸಲ್ಲಿಸಿದ್ದು, ಆ ವರದಿಯಲ್ಲಿ ಈ ಆಸನೌರವರು ಖಾಸಗಿ ಆಸ್ಪತ್ರೆಯಲ್ಲಿ **ಶಸ್ತ್ರ ಚಿಕ್ಸಿತೆ ಮಾಡಿರುವುದು ಮೇಲ್ನೋಟಕ್ಕೆ ಸಾಭೀತಾಗಿರುತ್ತದೆಂದು** ತನಗೆ ಪತ್ರ ಬರೆದಿರುತ್ತಾರೆಂದು, ಅದನ್ನು **ನಿಪಿ–14** ಎಂದು ಗುರುತಿಸಿಕೊಂಡಿರುತ್ತಾರೆ. **ನಿಪಿ–14ರ ಪತ್ರವನ್ನು** ತಾನು ದಿ: 14/12/2016 ರಂದು ಈ ಲೋಕಾಯುಕ್ತ ಸಂಸ್ಥೆಯ ಉಪ ನಿಬಂಧಕರು ವಿಚಾರಣೆಗಳು–5 ರವರಿಗೆ ನೀಡಿರುವುದಾಗಿ, ಸದರಿ ಪತ್ರವನ್ನು **ನಿಪಿ–15** ಎಂದು ಗುರುತಿಸಿರುತ್ತಾರೆ.

18) ಪಿಡಬ್ಲ್ಯೂ–2 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ತಾನು ವಿಚಾರಣೆಗೆ ಹಾಜರಾಗುವಂತೆ ಆಸನೌರವರಿಗೆ ನೋಟೀಸ್ ನೀಡಿದ್ದಾಗಿಯೂ ಹಾಜರಾಗಲಿಲ್ಲವಾದ್ದರಿಂದ ಆರ್.ಸಿ.ಹೆಚ್ ರವರಾದ ಡಾ: ಜನಾರ್ಧನ್ ರವರಿಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ತಾನು ಕೇಳಿಕೊಂಡಿದ್ದಾಗಿ, ಆ ಪ್ರಕಾರ ಡಾ: ಜನಾರ್ಧನ್ ರವರು **ನಿಪಿ–14** ರಂತೆ ತನಗೆ ವರದಿ ನೀಡಿರುತ್ತಾರೆಂದು, ಅದನ್ನು **ನಿಪಿ–15** ರ ಕವರಿಂಗ್ ಲೇಟರ್ ದೊಂದಿಗೆ ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. **ಮುಂದುವರೆದು,** ರೋಗಿಯಾದ

ನಿರ್ಮಲಮ್ಮ ರವರಿಗೆ ಇದ್ದ ಗರ್ಭಕೋಶದ ಶಸ್ತ್ರ ಚಿಕಿತ್ಸೆಯನ್ನು ಹಿಮ್ಸ್ ಆಸ್ಪತ್ರೆಯಲ್ಲಿಯೇ ಮಾಡಲು ಎಲ್ಲಾ ಸೌಲಭ್ಯಗಳು ಲಭ್ಯವಿದ್ದಾಗಿಯೂ, ಈ ಆಸನೌರವರು ಖಾಸಗಿ ಆಸ್ಪತ್ರೆಯಾದ ಎನ್.ಡಿ.ಆರ್.ಕೆ ಆಸ್ಪತ್ರೆಗೆ ದಾಖಲಿಸಿ, ಅಲ್ಲಿ ಈ ಆಸನೌರವರೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆಂದು, ಇದರಿಂದ ರೋಗಿಗೆ ಆರ್ಥಿಕ ನಷ್ಟವಾಗಿರುತ್ತದೆಂದು, ಈ ಆಸನೌರವರು ಕರ್ತವ್ಯವನ್ನು ಸರಿಯಾಗಿ ನಿಬಾಹಿಸದೆ ಕರ್ತವ್ಯ ಲೋಪ ಎಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

19) ಆ.ಸ.ನೌರವರು ಈ ಪ್ರಕರಣದಲ್ಲಿಯೂ ಸಹ ಪಿ.ಡಬ್ಲ್ಯೂ–1 ಮತ್ತು 2 ರವರನ್ನು ಪಾಟೀ ಸವಾಲು ವಿಚಾರಣೆಗೆ ಒಳಪಡಿಸದೇ, ಏಕತರ್ಫಿಯಾಗಿರುವುದನ್ನು ಪರಿಶೀಲಿಸಿದಾಗ, ಆ.ಸ.ನೌರವರು ದುರ್ನಡತೆಯುಳ್ಳ ಸ್ವಭಾವದವರಿರುವುದು ಮೇಲ್ನೋಟದಲ್ಲಿ ರುಜುವಾತಾಗುತ್ತದೆ.

20) ಈ ಎಲ್ಲಾ ಕಾರಣಗಳಿಂದ ಆ.ಸ.ನೌರವರು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

21) ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i)ರಿಂದ (iii) ರಡಿಯಲ್ಲಿ, ದುರ್ನಡತೆ ತೋರಿ ಕರ್ತವ್ಯ ಲೋಪ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ **ಡಾ॥ ರಾಜಶೇಖರ,** ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ರವರ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

16/3/21

**ದಿನಾಂಕ 16/03/2021.**

**(ಸೆಲ್ವಕುಮಾರ್.ಸಿ)**
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

KARNATAKA LOKAYUKTA

No.Uplok-2/DE/122/2019/ARE-16 Multi-storeyed Building,
Dr.B.R. AmbedkarVeedhi,
Bengaluru, dt.19.3.2021.

## RECOMMENDATION

Sub:- Departmental inquiry against Dr. Rajashekhara, Assistant Professor, Gynaecology Division, Hassan Institute of Medical Science, Hassan-reg.

Ref:- 1) Government Order No. HIMS SIBBANDI 1 08 2019-2020 dated: 24.04.2019.
2) Nomination order No. UPLOK-2/DE/122/2019 dated 3.5.2019 of Upalokayukta-2, State of Karnataka, Bangalore.
3) Inquiry report dated 16.3.2021 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 24.4.2019 initiated disciplinary proceedings against Dr. Rajashekhara, Assistant Professor, Gynaecology Division, Hassan Institute of Medical Science, Hassan [hereinafter referred to as Delinquent Government Officer, for short as 'DGO'] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE/122/2019 dated 3.5.2019 nominated Additional Registrar of Enquiries-16, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO - Dr. Rajashekhara, Assistant Professor, Gynaecology Division, Hassan Institute of Medical Science, Hassan was tried for the following charges:-

> "ಆಪಾದಿತ ಸರ್ಕಾರಿ ನೌಕರರಾದ **ಡಾ|| ರಾಜಶೇಖರ,** ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಅದ ನೀವು, ಶ್ರೀಮತಿ ನಿರ್ಮಲಮ್ಮ ಇವರ ಶಸ್ತ್ರ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯ ಇದ್ದರೂ ಸಹ, ಅದನ್ನು ಮರೆಮಾಚಿ ಖಾಸಗಿ ಆಸ್ಪತ್ರೆಗೆ ಹೋಗಲು ಸೂಚಿಸಿ, ಆ ಮೂಲಕ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯುನ್ನೆಸಗಿರುತ್ತೀರಿ".

4. The Inquiry Officer (Additional Registrar of Enquiries-16) on proper appreciation of oral and documentary evidence has held that, 'the Disciplinary Authority has 'proved' the charge levelled against the DGO Dr. Rajashekhara, Assistant Professor, Gynaecology Division, Hassan Institute of Medical Science, Hassan.'

5. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGO furnished by the Inquiry Officer, DGO – Dr. Rajashekhar, is due for retirement on 31.12.2031.

7. Having regard to the nature of charge 'proved' against DGO – Dr. Rajashekhara, Assistant Professor, Gynaecology Division, Hassan Institute of Medical Science, Hassan and on consideration of the totality of circumstances-,

i) it is hereby recommended to the Government to impose penalty of 'withholding three annual increments payable to DGO – Dr. Rajashekhara with cumulative effect.'

8. Action taken in the matter shall be intimated to this Authority.

Connected records are enclosed herewith.

19/3/21

(JUSTICE B.S.PATIL)
Upalokayukta-2,
State of Karnataka.